


**ಪೌಲನ ಪ್ರಥಮ ಹಾಗೂ ಎರಡನೆಯ ಸೇವಾ ಪ್ರಯಾಣ**




**ಪೌಲನ ಮೂರನೆಯ ಸೇವಾ ಪ್ರಯಾಣ**

# ಪೌಲನ ಮೂರನೆಯ ಸೇವಾ ಪ್ರಯಾಣ
# (18:23 - 21:17)

ಗಲಾತ್ಯದಲ್ಲಿಯೂ ಪ್ರಗ್ಯದಲ್ಲಿಯೂ ಸಂಚಾರ ಮಾಡುತ್ತಾ ಶಿಷ್ಯರೆಲ್ಲರನ್ನು ದೃಢಪಡಿಸಿ, ಅವನು ಮಲೆನಾಡಿಗೆ ಹೋದನು ❶ ಎಫೆಸ (18:23-28), ಮೂರು ವರ್ಷಗಳ ಕಾಲ ಉಪದೇಶವನ್ನೂ ಹಾಗೂ ಮಹತ್ಕಾರ್ಯಗಳನ್ನು ಅಲ್ಲಿ ಮಾಡಿದನು (19:1-41). ನಂತರ ಸಭೆಗಳನ್ನು ಪುನಃ ಸಂದರ್ಶಿದನು ❷ ಮೆಕೆದೊನ್ಯ ಹಾಗೂ ಗ್ರೀಸ್ (20:1-5). ಅಖಾಯದಲ್ಲಿ ಮೂರು ತಿಂಗಳಿದ್ದ ನಂತರ, ಪುನಃ ಮೆಕೆದೊನ್ಯವನ್ನು ಹಾದು ಹೋದನು ❸ ತ್ರೋವ (20:6-12), ಒಂದು ವಾರಕಾಲ ಅಲಿದ್ದು, ಎಫೆಸವನ್ನು ಹಾದು ಎಫೆಸದ ಹಿರಿಯನನ್ನು ಸಂಧಿಸಿದನು ❹ ಮಿಲೇತಕ್ಕೆ (20:13-33) ಕಣ್ಣೀರಿನಿಂದ ಬೀಳ್ಕೊಂಡು, ಅವನ ಸಂಗಡಿಗರು ❺ ಕೋಸ್‌ಗು, ರೋಧೆ ಹಾಗೂ ಪತರಕ್ಕೆ ಬಂದರು (21:1-17). ಫೊಯಿನಿಕೆಯಿಂದ ಸಮುದ್ರಯಾನ ಮಾಡಿ ❻ ತೂರ್, ಪಟ್ಟಣಕ್ಕೆ ಬಂದರು, ಅಲ್ಲಿ ಸಹೋದರರು ಪೌಲನನ್ನು ಹೋಗಗೂಡಿಸಲಿಲ್ಲ. ನಂತರ ಆ ಹಡಗು ಫೊಲೆಮಾಯಕ್ಕೆ ಹೊರಟಿತು. ಕೆಲವು ದಿವಸಗಳ ನಂತರ, ❼ ಕೈಸರೆಗೆ ಬಂದನು ನಂತರ ಅಗಬ್ಬನು, ಪೌಲನನ್ನು ಅನ್ಯರಿಗೆ ವಶಮಾಡುವರು ಎಂದು ಮುಂದಾಗಿ ಹೇಳಿದನು. ಅದಾಗ್ಯೂ ಪೌಲನು ❽ ಯೆರೂಸಲೇಮಿಗೆ ಹೋದನು, ಅಲ್ಲಿ ಉತ್ತಮವಾದ ಸ್ವಾಗತವನ್ನು ಹೊಂದಿದ್ದರೂ, ನಂತರ ಅವನನ್ನು ಹಿಡಿದರು.

# ಎಫೆಸದಲ್ಲಿ ಮೂರು ವರುಷ

"ಆದಕಾರಣ ನಾನು ಕಣ್ಣೀರು ಸುರಿಸುತ್ತಾ ಮೂರು ವರುಷ ಹಗಲಿರುಳು ಎಡೆ ಬಿಡದೆ ಬುದ್ಧಿ ಹೇಳಿದೆನು" (20:31). ಅಲ್ಲಿ ಅವನ ಮೂರು ವರುಷಗಳ ಕಾಲ ಮಾಡಿದ ಸೇವೆಯ ಸಕಲ ವಿವರಗಳು ಇಲ್ಲದೆ ಇದ್ದರೂ ಎಫೆಸದ "ತೀವ್ರ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡನು" (1 ಕೊರಿಂಥ 16:9). ಅವನ ಪ್ರಯಾಣದ ಸಮಯದಲ್ಲಿ ಬೇರೆ ಡೆಗಿಂತಲೂ ಹೆಚ್ಚಿನ ಸಮಯವನ್ನು ಎಫೆಸದಲ್ಲಿ ಕಳೆದನು. ಅದರ ಪರಿಣಾಮವಾಗಿ ಪೌಲನು ಹೇಳಿದ್ದು, "ಆಸ್ಯ ಸೇವೆಯಲ್ಲಿ ವಾಸವಾಗಿದ್ದ ಯೆಹೂದ್ಯರೂ ಗ್ರೀಕರೂ ಎಲ್ಲರು ಕರ್ತನ ವಾಕ್ಯವನ್ನು ಕೇಳಿದರು" (19:10).

ಮೂರು ತಿಂಗಳು ಕಾಲ ಪೌಲನು ಸಭಾಮಂದಿರದಲ್ಲಿ ವಾದಿಸಿದನು (19:8). ಈ ಮಾರ್ಗವು ಕೆಟ್ಟದ್ದು ಎಂದು ಹೇಳುವವರ ಎದುರಾಗಿ ವಾದಿಸಿದನು (19:9). ಆದ್ದರಿಂದ ಅವನು ಅವರನ್ನು ಬಿಟ್ಟು ಹೋಗಿ ತುರನ್ನನ ತರ್ಕಶಾಲೆಯಲ್ಲಿ ವಾದಿಸಿದನು (19:10). 19:22ರಲ್ಲಿ ಪೌಲನು ಕಳೆದ ನಿಗಧಿತವಾದ ಸಮಯವನ್ನು ಲೂಕನು ತಿಳಿಸಿರುವನು. ಸಾಮಾನ್ಯವಾಗಿ ಯೆಹೂದ್ಯರು, ಅರ್ಧವರ್ಷವನ್ನು ಲೆಕ್ಕಿಸಿ, ಪೂರ್ಣ ವರ್ಷವನ್ನು ಗುಣಿಸುತ್ತಿದ್ದರು.